ಮಾರಾಟಕ್ಕಿಟ್ಟರು. ಕಾಫಿ ತೋಟದ ಲೈನ್ ಮನೆಗಳಲ್ಲಿ ವಾಸಿಸುವ ಕೂಲಿ ಕಾರ್ಮಿಕರಾದ ತಮಿಳುನಾಡಿನ ಅಣ್ಣಾಚ್ಚಿಗಳು, ಲಂಬಾಣಿಗಳು, ತುಳುವರು ಇನ್‌ಸ್ಟಾಲ್‌ಮೆಂಟ್‌ನಲ್ಲಿ ಪ್ರತಿವಾರ ಸ್ವಲ್ಪಸ್ವಲ್ಪವೇ ಹಣ ನೀಡಿ ಟೇಪ್‌ರೆಕಾರ್ಡರ್ ಕೊಂಡುಕೊಳ್ಳಲಾರಂಭಿಸಿದರು.

ನನಗಂತೂ ಬಣ್ಣಬಣ್ಣದ ಲೈಟ್ ಇರುವ, ಎರಡು ಆಡಿಯೋ ಕ್ಯಾಸೆಟ್ ಹಾಕುವ ಟೇಪ್‌ರೆಕಾರ್ಡರ್ ನೋಡಿ ಕುತೂಹಲ ಉಂಟಾಗಿತ್ತು. ಕ್ಯಾಸೆಟ್‌ನಲ್ಲಿರುವ ಹಾಡನ್ನು ಮತ್ತೊಂದು ಕ್ಯಾಸೆಟ್‌ಗೆ ಕಾಪಿ ಮಾಡಲು ಈ ಎರಡು ಬಾಗಿಲಿರುವ ಟೇಪ್‌ರೆಕಾರ್ಡರ್ ಬಳಸುತ್ತಿದ್ದರು. ಅಂಗಡಿಯ ಗೋಡೆಗೆ ಮರದ ಸಣ್ಣ ಪಟ್ಟಿಹೊಡೆದು ಅದರೊಳಗೆ ಆಡಿಯೋ ಕ್ಯಾಸೆಟ್ ಜೋಡಿಸಿಟ್ಟಾಗ ಅದರ ಮೇಲೆ ಕಾಣುವ ಸಿನಿಮಾ ನಟ-ನಟಿಯರ ಚಿತ್ರ, ಹೆಸರು, ಹಾಡುಗಳ ವಿವರ ಎಲ್ಲವೂ ಈಗ ನೆನಪು ಮಾತ್ರ. ಕ್ಯಾಸೆಟ್‌ನ ಒಳಗಿರುವ ರೀಲ್ ಸಿಕ್ಕಿ ಹಾಕಿಕೊಂಡರೆ ರೆನಾಲ್ಡ್ಸ್ ಪೆನ್ನಿನ ಮೂತಿಯನ್ನು ಆಡಿಯೋ ಕ್ಯಾಸೆಟ್‌ನ ಎರಡು ಕಣ್ಣುಗಳಲ್ಲಿ ಒಂದು ಕಣ್ಣಿನೊಳಗೆ ಹಾಕಿ ತಿರುಗಿಸಿ ಬಾಪ ಸರಿ ಮಾಡುತ್ತಿದ್ದ ದೃಶ್ಯ ಈಗಲೂ ಕಣ್ಣಿನೊಳಗೆ ನಿಂತಿದೆ. ಹಾಳಾದ ಆಡಿಯೋ ಕ್ಯಾಸೆಟ್ ಮುರಿದು ಅದೊಳಗಿನಿಂದ ರೀಲ್ ಕಿತ್ತು ಒಂದು ಮರದಿಂದ ಮತ್ತೊಂದು ಮರಕ್ಕೆ ಕಟ್ಟಿಬಿಡುವುದು. ಗಾಳಿಗೆ ರೀಲ್ ವಿಶಿಷ್ಟ ಶಬ್ದ ಮಾಡುವ ಮೂಲಕ ನಮ್ಮ ಆಟದ ಸಾಮಗ್ರಿಯಾಗಿದ್ದು ಉಂಟು. ಇನ್ಸ್ಟಾಗ್ರಾಂ, ಫೇಸ್‌ಬುಕ್‌ಗಳಲ್ಲಿ ರೀಲ್ಸ್ ನೋಡುವಾಗ, ರೀಲ್ಸ್ ಎಂಬ ಪದ ಕೇಳುವಾಗ ನನಗಂತೂ ನೆನಪಾಗುವುದು ಆಡಿಯೋ ಕ್ಯಾಸೆಟ್‌ನ ಒಳಗಿರುವ ರೀಲೇ ಆಗಿದೆ.

ಎರಡು ವರ್ಷಗಳ ಹಿಂದೆ ನನ್ನ ಗುರುಗಳಾದ ಸಬಿಹಾ ಭೂಮಿಗೌಡ ಮೇಡಂ ಅವರ ಮನೆಯಲ್ಲಿ ಒಂದಿಷ್ಟು ಹಳೆಯ ಜನಪದಗೀತೆ ಇರುವ ಆಡಿಯೋ ಕ್ಯಾಸೆಟ್‌ಗಳ ಸಂಗ್ರಹದ ಜೊತೆಗೆ ಎರಡು ಆಡಿಯೋ ಕ್ಯಾಸೆಟ್ ಹಾಕುವ ಟೇಪ್‌ರೆಕಾರ್ಡರ್ ಕಂಡು ಬಾಲ್ಯಕಾಲ ಮತ್ತೆ ನೆನಪಿಗೆ ಬಂತು. ವಿಪರ್ಯಾಸವೆಂದರೆ ಬಳಸದೇ ಹಾಗೇ ಬಿಟ್ಟದರಿಂದ ಆ ಟೇಪ್‌ರೆಕಾರ್ಡರ್ ಎಷ್ಟೂ ಪ್ರಯತ್ನಿಸಿದರೂ ಸರಿ ಬರಲೇ ಇಲ್ಲ.

ದೂರದರ್ಶನ ಬಂದ ನಂತರ ಎಲ್ಲರ ಮನೆಗಳಲ್ಲಿಯೂ ಟಿ.ವಿ ಯುಗ ಆರಂಭವಾಯಿತು. ವಿಸಿಆರ್ ಬಂತು. ಇದೇ ಕಾಲಕ್ಕೆ ಬಾಪನ ಆಡಿಯೋ ಕ್ಯಾಸೆಟ್ ಅಂಗಡಿ ದಿವಾಳಿಯ ಹಂತ ತಲುಪಿತು. ಬಾಪ ವ್ಯಾಪಾರ ಕೈ ಬಿಟ್ಟು ಹೊಸಾ ಆಟೋರಿಕ್ಷಾ ಖರೀದಿಸಿದರು. ಮೈಸೂರಿನಿಂದ ಆಟೋರಿಕ್ಷಾ ತರುವಾಗಲೇ ಅದರೊಳಗೆ ಸ್ಪೀಕರ್ ಮತ್ತು ಆಡಿಯೋ ಸಿಸ್ಟಮ್ ಅಳವಡಿಸಿಕೊಂಡು ಬರಲಾಗಿತ್ತು. ಹದಿನಾಲ್ಕು ವರ್ಷಗಳಲ್ಲಿ ಹಲವು ಬಾರಿ ಆಟೋರಿಕ್ಷಾ ತನ್ನ ಬಣ್ಣ, ಸ್ವರೂಪವನ್ನು ಬದಲಾಯಿಸಿಕೊಂಡರೂ ಆ ಹಳೆಯ ಆಡಿಯೋ ಸಿಸ್ಟಮ್‌ನನ್ನು ಬಾಪ ಹಾಗೇ ಉಳಿಸಿಕೊಂಡು ಬಂದಿದ್ದರು.

ನಾನು ಏಳನೇ ತರಗತಿಗೆ ಬರುವ ಹೊತ್ತಿಗಾಗಲೇ ಅಜೀಜ್ ಅಣ್ಣನ ಎ.ಕೆ. ಶಾಮಿಯಾನ ಎಂಬ ಅಂಗಡಿ ಮಾದಾಪುರದಲ್ಲಿ ಆರಂಭವಾಗಿತ್ತು. ಅವರ ಜೊತೆಯಲ್ಲಿ ಶಾಮಿಯಾನ ಹಾಲು, ಸೌಂಡ್ಸ್ ಸಿಸ್ಟಮ್ ಅಪರೇಟ್ ಮಾಡಲು, ಲೈಟಿಂಗ್ ಕೆಲಸಕ್ಕೆ ಶಾಲೆಗೆ ಹೋಗುತ್ತಲೇ ಸೇರಿಕೊಂಡ ನನಗೆ ಹೊಸದೊಂದು ಜಗತ್ತಿನ ಪರಿಚಯವಾಗಿತ್ತು. ದೊಡ್ಡದೊಡ್ಡ ಧ್ವನಿವರ್ಧಕ, ಸ್ಪೀಕರ್, ಆಂಪ್ಲೀಫ್ಲೇಯರ್‌ಗಳ ಜೊತೆಯಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು. ರಾತ್ರಿ ಹೊತ್ತು ಮೆಹಂದಿ ಅಥವಾ ಮದುವೆ ಸಮಾರಂಭಗಳಿದ್ದರೆ ಒಂದು ಕಡೆ ದುಗುಡ; ಮತ್ತೊಂದು ಕಡೆ ಸಂಭ್ರಮ. ಕಾರಣ ಕೊಡಗಿನ ಮುಸ್ಲಿಮೇತರರ ಮದುವೆಗಳಲ್ಲಿ ಹೆಚ್ಚಾಗಿ ಮದ್ಯಪಾನದ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಮಾಂಸದೂಟ ಮಾಡಿ, ಕಂಠಪೂರ್ತಿ ಕುಡಿದು ಟಪ್ಪಾಂಗುಚ್ಚಿ ಹಾಡುಗಳಿಗೆ ಹೆಜ್ಜೆಹಾಕಲು ತುದಿಗಾಲಲ್ಲಿ ನಿಂತಿರುವ; ಗಂಡು ಹೆಣ್ಣೆಂಬ ಭೇದವಿಲ್ಲದೆ ಕುಣಿಯುವ ಜನರು ಇಂತಹ ಕಾರ್ಯಕ್ರಮಗಳ ಹೈಲೈಟ್. ಇಡೀ ಸಮಾರಂಭಕ್ಕೆ ವರ್ಣರಂಜಿತ ಕಳೆಯನ್ನು ಈ ಟಪ್ಪಾಂಗುಚ್ಚಿ ಡ್ಯಾನ್ಸರ್‌ಗಳು ತಂದುಕೊಡುತ್ತಾರೆ. ಆದರೆ ಇವರಿಂದ ಸೌಂಡ್ಸ್ ಅಪರೇಟರಾದ ನನಗೆ ಪೀಕಲಾಟ ತಪ್ಪಿದ್ದಲ್ಲ. ಒಬ್ಬರಿಗೆ ಕನ್ನಡಹಾಡು ಬೇಕು, ಮತ್ತೊಬ್ಬನಿಗೆ ಕೊಡವವಾಲಗ, ಮಗದೊಬ್ಬರಿಗೆ ತಮಿಳುಹಾಡು ಸಾಕು. ಹೀಗೆ ಒಬ್ಬೊಬ್ಬರ ಆಶೋತ್ತರಗಳನ್ನು ಪೂರೈಸುವುದರೊಳಗೆ ಮಧ್ಯರಾತ್ರಿಯಾಗಿರುತ್ತದೆ. ಆ ಕಾಲಕ್ಕೆ ಹಾಡುಗಳು ಸಿ.ಡಿ ಮತ್ತು ಡಿವಿಡಿ ಪ್ಲೇಯರ್‌ಗಳಿಗೆ ವರ್ಗವಾಗಿತ್ತು. ಜನರ